ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	573
ಸದಸ್ಯರ ಹೆಸರು	:	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ	:	11/12/2020

ಕ್ರ ಸಂ.	ಪ್ರಶ್ನೆ	ಉತ್ತರ
ಅ.	ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಕರ್ತವ್ಯಗಳೇನು; (ವಿವರ ನೀಡುವುದು)	ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ನಿರ್ವಹಿಸುತ್ತಿರುವ ಕರ್ತವ್ಯಗಳ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
ಆ.	ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಖ್ಯೆ ಎಷ್ಟು;	ರಾಜ್ಯದಲ್ಲಿ ಮಂಜೂರಾಗಿರುವ ಅಂಗನವಾಡಿ ಕಾರ್ಯಕರ್ತೆಯರು / ಸಹಾಯಕಿಯರ ಸಂಖ್ಯೆ ಈ ಕೆಳಗಿನಂತಿದೆ. ಅಂಗನವಾಡಿ ಕಾರ್ಯಕರ್ತೆಯರು – 65911 ಅಂಗನವಾಡಿ ಸಹಾಯಕಿಯರು – 62580
ಇ.	ಸದರಿಯವರಿಗೆ ಮಾಸಿಕ ನೀಡಲಾಗುತ್ತಿರುವ ಗೌರವಧನವೆಷ್ಟು; ರಾಜ್ಯ ಮತ್ತು ಕೇಂದ್ರ ಸರ್ಕಾರದ ಪಾಲು ಎಷ್ಟು; (ಪ್ರತ್ಯೇಕವಾಗಿ ವಿವರ ನೀಡುವುದು)	• ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಸಿಕ ಗೌರವಧನ ರೂ.10,000/- • ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಸಿಕ ಗೌರವಧನ ರೂ.6,250/- • ಅಂಗನವಾಡಿ ಸಹಾಯಕಿಯರಿಗೆ ಮಾಸಿಕ ಗೌರವಧನ ರೂ. 5,250/- ರಾಜ್ಯ ಮತ್ತು ಕೇಂದ್ರ ಸರ್ಕಾರದ ಪಾಲಿನ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.
ಈ.	ರಾಜ್ಯದಲ್ಲಿ ಸ್ವಂತ ಕಟ್ಟಡ ಮತ್ತು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು ?	ರಾಜ್ಯದಲ್ಲಿ ಸ್ವಂತ ಕಟ್ಟಡ ಮತ್ತು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಈ ಕೆಳಗಿನಂತಿದೆ. ಸ್ವಂತ ಕಟ್ಟಡ : 44894 ಬಾಡಿಗೆ ಕಟ್ಟಡ : 11801

(ಶಶಿಕಲಾ. ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತುವಿಕಲಚೇತನರ,
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ :ಮಮಇ 232 ಐಸಿಡಿ 2020

ಅನುಬಂಧ-1

ಅಂಗನವಾಡಿ ಕಾರ್ಯಕರ್ತೆಯ ಕರ್ತವ್ಯಗಳು :

- ಜನ ಸಮುದಾಯದ ಸಮೀಕ್ಷೆಯನ್ನು ಕೈಗೊಂಡು ಸಹಾಯ ಅಗತ್ಯವಾಗಿರುವಂತವರ ವಿವರ ಸಂಗ್ರಹಿಸುವುದು. 6 ವರ್ಷದ ಕೆಳಗಿನ ಮಕ್ಕಳ ಸಂಖ್ಯೆ, ಗರ್ಭಿಣಿ ಮತ್ತು ಹಾಲುಣಿಸುತ್ತಿರುವ ತಾಯಂದಿರು, ಇವುಗಳನ್ನು ಸಂಗ್ರಹಿಸಬೇಕು. ಕುಟುಂಬಗಳ ಸಂಖ್ಯೆ, ಕುಟುಂಬದಲ್ಲಿ ಸದಸ್ಯರ ಸಂಖ್ಯೆ, ಕುಟುಂಬದ ಆದಾಯ ಇವುಗಳನ್ನು ಸಂಗ್ರಹಿಸಬೇಕು. ಮುಖ್ಯ ಅಂಕಿ-ಅಂಶಗಳಾದ ಜನನ ಮರಣಗಳ ದಾಖಲೆಗಳನ್ನು ಇಡಬೇಕು.
- 3 ಮತ್ತು 6 ವರ್ಷಗಳ ನಡುವಣ ಮಕ್ಕಳ ಶಾಲಾ ಪೂರ್ವ ಶಿಕ್ಷಣವನ್ನು ಕೈಗೊಳ್ಳಬೇಕು.
- 0-6 ವರ್ಷಗಳ ನಡುವಿನ ಮಕ್ಕಳ ಮತ್ತು ಗರ್ಭಿಣಿ ಹಾಗೂ ಹಾಲುಣಿಸುತ್ತಿರುವ ತಾಯಂದಿರಿಗೆ ಅಧಿಕ ಪೋಷಕಾಂಶ ಇರುವ ಆಹಾರವನ್ನು ಒದಗಿಸುವುದು.
- ಪ್ರಾಥಮಿಕ ಆರೋಗ್ಯ ಹಾಗೂ ಪ್ರಥಮ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸುವುದು.
- ರೋಗ ನಿರೋಧಕ ಚುಚ್ಚುಮದ್ದು ಮತ್ತು ಆರೋಗ್ಯ ತಪಾಸಣೆ ಮಾಡುವಲ್ಲಿ ಆರೋಗ್ಯ ಸಿಬ್ಬಂದಿಗೆ ಸಹಾಯ ಮಾಡುವುದು.
- ಪ್ರಬಲವಾಗಿ ನ್ಯೂನ ಪೋಷಣೆಗೊಳಗಾದ, ಪೋಷಕಾಂಶದ ಅಗತ್ಯವುಳ್ಳ, ಅನಾರೋಗ್ಯ ಉಂಟಾದ, ಅಪಾಯದಲ್ಲಿರುವ ಮಕ್ಕಳನ್ನು, ಅಂಟುರೋಗ ಇರುವ ರೋಗಿಗಳನ್ನು ತಜ್ಞ ವೈದ್ಯರಲ್ಲಿಗೆ ಕಳುಹಿಸಬೇಕು.
- ಅಂಗನವಾಡಿ ಕೇಂದ್ರಕ್ಕೆ ಬರುವ ಗರ್ಭಿಣಿ ಮತ್ತು ಹಾಲುಣಿಸುತ್ತಿರುವ ತಾಯಂದಿರಿಗೆ ಅಂಗನವಾಡಿ ಕಾರ್ಯಕರ್ತರು ಮನೆ ಭೇಟಿ ಮಾಡುವ ವೇಳೆಯಲ್ಲಿ ಮತ್ತು ಶಿಕ್ಷಣ ಕಾರ್ಯಕ್ರಮದ ಕಾಲದಲ್ಲಿ ಆರೋಗ್ಯ ಮತ್ತು ಪೋಷಣೆಗೆ ಸಂಬಂಧಿಸಿದ ತಿಳುವಳಿಕೆಯನ್ನು ಕೊಡಬೇಕು.
- ಅಂಗನವಾಡಿಗೆ ಬರುವ ತಂದೆ ತಾಯಿಯರನ್ನು ಕಂಡು ಅವರೊಡನೆ ಸಂಪರ್ಕ ಬೆಳೆಸುವುದು.
- ತೂಕದ ಕಾರ್ಡ್‌ಗಳು, ರಿಜಿಸ್ಟರ್‌ಗಳು, ಮಗುವಿನ ಆರೋಗ್ಯ, ಪೋಷಕಾಂಶಕ್ಕೆ ಸಂಬಂಧಿಸಿದ ದಾಖಲೆಗಳು, ಅಂಗನವಾಡಿ ಹಾಜರಿ ದಾಖಲೆಗಳು ಇವುಗಳನ್ನು ಬರೆದಿಟ್ಟು ಜನಸಮುದಾಯ ಸೇವೆಯ ಉಪಯೋಗವನ್ನು ಸರಿಯಾಗಿ ಪಡೆಯುತ್ತಿದೆಯೇ ಎಂದು ತಿಳಿಯುವಲ್ಲಿ ಸಹಕರಿಸುವುದು.
- ಗ್ರಾಮದ ಇತರ ಸಂಘ-ಸಂಸ್ಥೆಗಳಾದ ಪಂಚಾಯಿತಿ, ಮಹಿಳಾ ಮಂಡಳಿಗಳೊಡನೆ ಸಂಪರ್ಕ, ಶಾಲಾ ಉಪಾಧ್ಯಾಯರೊಡನೆ ಸಂಪರ್ಕ ಮತ್ತು ಕಾರ್ಯಕ್ರಮದ ಯಶಸ್ಸಿಗೆ ಅವರ ಸಹಕಾರ ಸಹಭಾಗಿತ್ವವನ್ನು ಕೋರುವುದು.
- 15-45 ವರ್ಷಗಳ ವಯಸ್ಸಿನ ಹೆಂಗಸರ ಅಕ್ಷರ ಕಲಿಕೆ ಕಾರ್ಯಕ್ರಮವನ್ನು ಏರ್ಪಡಿಸಿ ನಡೆಸುವುದು.

ಅಂಗನವಾಡಿ ಸಹಾಯಕಿಯ ಕರ್ತವ್ಯಗಳು :

- ಮಕ್ಕಳಿಗೆ ಹಾಗೂ ತಾಯಂದಿರಿಗೆ ಆಹಾರವನ್ನು ಸಿದ್ಧಪಡಿಸುವುದು ಹಾಗೂ ನೀಡುವುದು.
- ಅಂಗನವಾಡಿ ಕೇಂದ್ರದ ಆವರಣವನ್ನು ಸ್ವಚ್ಛವಾಗಿರಿಸುವುದು ಹಾಗೂ ನೀರು ತರುವುದು.
- ಅತೀ ಚಿಕ್ಕ ಮಕ್ಕಳ ಸ್ವಚ್ಛತೆಯನ್ನು ಕಾಪಾಡುವುದು.
- ಗ್ರಾಮದ ಚಿಕ್ಕ ಮಕ್ಕಳನ್ನು ಮನೆಗಳಿಂದ ಅಂಗನವಾಡಿಗೆ ಕರೆತರುವುದು.
- ಅಂಗನವಾಡಿ ಕಾರ್ಯಕರ್ತೆಯರ ಗೈರು ಹಾಜರಿಯಲ್ಲಿ ಕೇಂದ್ರದ ಚಟುವಟಿಕೆ ನಡೆಸಿಕೊಂಡು ಹೋಗುವುದು.

ಅನುಬಂಧ-2

ಅಂಗನವಾಡಿ ಕಾರ್ಯಕರ್ತೆ, ಮಿನಿ ಅಂಗನವಾಡಿ ಕಾರ್ಯಕರ್ತೆ ಮತ್ತು ಅಂಗನವಾಡಿ ಸಹಾಯಕಿಯರಿಗೆ ನೀಡಲಾಗುತ್ತಿರುವ ಗೌರವಧನದ ವಿವರ (ರೂಪಾಯಿಗಳಲ್ಲಿ)

ವಿವರ	ಕೇಂದ್ರ ಸರ್ಕಾರದ ಗೌರವಧನ	ರಾಜ್ಯ ಸರ್ಕಾರದ ಹೆಚ್ಚುವರಿ ಗೌರವಧನ	ಒಟ್ಟು
ಅಂಗನವಾಡಿ ಕಾರ್ಯಕರ್ತೆರಿಗೆ	4500	5500	10000
ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ	3500	2750	6250
ಅಂಗನವಾಡಿ ಸಹಾಯಕಿಯರಿಗೆ	2500	2750	5250